ಹೇಳಿ, ನಾನು ವ್ಯವಸ್ಥೆ ಮಾಡುತ್ತೇನೆ. ಸುತ್ತಮುತ್ತಲಿನ ಸ್ಥಳಗಳಾದರೆ ನಮ್ಮ ಮನೆಯಲ್ಲಿಯೇ ಉಳಿಯಲಿಕ್ಕೆ ವ್ಯವಸ್ಥೆ ಮಾಡುತ್ತೇನೆ, ಅದೂ ನಿಮಗೆ ಅಭ್ಯಂತರ ಇಲ್ಲವೆಂದರೆ' ಎಂದು ಒಂದೇ ಉಸಿರಿನಲ್ಲಿ ವಿಶ್ವನಾಥಯ್ಯನ ಎದುರು ಆ ವ್ಯಕ್ತಿ ಹೇಳಿದರು.

ಅಪರಿಚಿತರು. ಇವರನ್ನು ಹೇಗೆ ನಂಬುವುದು ಎಂಬೆಲ್ಲ ಯೋಚನೆಗಳು ಮಿಂಚಿನ ಸೆಳಕಿನಂತೆ ಮನದ ಪಟಲದಲ್ಲಿ ಫಳೀರನೆ ಬಂದು ಹೋದವು.

ನಮ್ಮ ಮನದಿಂಗಿತವನ್ನು ಗ್ರಹಿಸಿದವರಂತೆ, 'ಪರಿಚಿತನಲ್ಲ. ಕರೆದ, ಇವನು ಕರೆದಾಕ್ಷಣ ಇವನ ಮನೆಯಲ್ಲಿ ಹೇಗೆ ಉಳಿದುಕೊಳ್ಳುವುದು ಎಂದು ಯೋಚಿಸುತ್ತಿದ್ದೀರಾ? ಅಂತಹ ಚಿಂತೆ ನಿಮಗೆ ಬೇಕಿಲ್ಲ. ಇವಳು ಇದ್ದಾಳಲ್ಲ ನನ್ನ ಮೊಮ್ಮಗಳು ಪುಟ್ಟಿ, ನಿಮಗೆ ಅಗತ್ಯವಿರುವ ಎಲ್ಲಾ ವ್ಯವಸ್ಥೆ ಮಾಡುತ್ತಾಳೆ. ನಮಗೆ ನಿಮ್ಮ ಆತಿಥ್ಯ ಮಾಡಲು ಒಪ್ಪಿಗೆ ನೀಡಬೇಕಷ್ಟೇ' ಎಂದು ಮಾರುತ್ತರಕ್ಕೂ ಕಾಯದೇ ಅವರು ಹೇಳಿದರು.

ಇವರ ಮಾತನ್ನು ಕೇಳಿದ ವಿಶ್ವನಾಥಯ್ಯ ನಮ್ಮ ಯಾರ ಒಪ್ಪಿಗೆಗೂ ಕಾಯದೇ, 'ಆಯ್ತು, ನಾವು ಬರುತ್ತೇವೆ, ನಡೆಯಿರಿ' ಎಂದು ಹೇಳಿದವರೇ ಎದ್ದುಬಿಟ್ಟರು. ವಿಧಿಯಿಲ್ಲ, ಬಸವನ ಹಿಂದೆ ಬಾಲ ಎಂಬಂತೆ ನಾವು ಅವರನ್ನು ಅನುಸರಿಸಿದೆವು, ಮನೆ ತಲುಪಿದೆವು.

* * *

ಅದೊಂದು ವಿಶಾಲವಾದ ಹಜಾರ ಹೊಂದಿದ ಹಳೆಯ ಕಾಲದ ತೊಟ್ಟಿ ಮನೆ. ಮಧ್ಯದಲ್ಲಿ ತೊಟ್ಟಿ. ಮಳೆಗಾಲದಲ್ಲಿ ಮನೆಯ ಒಳಗೇ ನೀರು ಬಿದ್ದರೂ ಒಂದು ಹನಿಯಾದರೂ ಮೇಲಿನ ಕೊಠಡಿಗಳಿರುವ ಭಾಗಕ್ಕೆ ನೀರಿನ ಒಂದು ಹನಿಯೂ ಸಿಡಿಯದಂತಿದ್ದ ಅದ್ಭುತ ನಿರ್ಮಾಣ.

ಮನೆಯೊಳಗೆ ತಲುಪಿದೊಡನೆ ರಾಯರು ಮನೆಯ ಒಂದೊಂದು ಭಾಗವನ್ನೂ ಪರಿಚಯಿಸುವ ಉಮೇದಿನಲ್ಲಿ ಮನೆಯಲ್ಲಿನ ಎಲ್ಲವನ್ನೂ ಬೆರಳು, ಕೈ ಮಾಡಿ ತೋರಿಸಿ ತೋರಿಸಿ ವಿವರಣೆ ನೀಡಿದರು. ನೀವು ಇಲ್ಲಿ ತಂಗಬಹುದು ಎಂದವರೇ ಉಪಾಹಾರದ ವ್ಯವಸ್ಥೆ ಮಾಡುವುದಾಗಿ ಹೇಳಿಹೋದರು.

ಅಲ್ಲಿನ ವಾಸ್ತವ್ಯ ಮೂರ್ನಾಲ್ಕು ದಿನಗಳಷ್ಟು ದೀರ್ಘ ಆಗಬಹುದು, ಅದೂ ನಾವು ಜೀವಮಾನದಲ್ಲಿ ನೆನಪಿಟ್ಟುಕೊಳ್ಳುವಷ್ಟು ಆಹ್ಲಾದಕರ ಆಗಿರಬಹುದು ಎಂದು ಭಾವಿಸಿಯೇ ಇರಲಿಲ್ಲ.

* * *

ಮುಂದಿನ ಹದಿನೈದು- ಇಪ್ಪತ್ತು ನಿಮಿಷದಲ್ಲಿ ನಮ್ಮ ಹೊಟ್ಟೆಗಳನ್ನು ತುಂಬಿಸುವ ಖಾದ್ಯಗಳೆಲ್ಲ ಸಿದ್ಧವಾದವು. ಉಂಡ ಮೇಲೆ ಕೆಲಕಾಲ ವಿಶ್ರಾಂತಿಯೂ ಆಯಿತು.

ಇಷ್ಟರೊಳಗೆ ಮನೆಯ ಮಗ್ಗುಲಲ್ಲಿನ ರಸ್ತೆಯಲ್ಲಿ ಹಾದು ಹೋಗುತ್ತಿದ್ದವರು ಅಪ್ಪಯ್ಯನ ಮನೆಗೆ ಯಾರೋ ಹೊಸ ನೆಂಟರು ಬಂದಿದ್ದಾರೆ. ಅಪ್ಪಯ್ಯನ ಆಯುಷ್ಯ ಇನ್ನೂ ಹತ್ತು ವರ್ಷ ಹೆಚ್ಚಾಗುವುದು ನಿಶ್ಚಿತ ಎಂದು ಹೇಳುವುದು ಕೇಳಿತು. ಇವರೆಲ್ಲ ಯಾಕೆ ಹೀಗೆ ಹೇಳುತ್ತಾರೆ ಎಂಬುದು ನಮಗೆ ಅರ್ಥವಾಗಲಿಲ್ಲ.

ಯಾರೋ ದಾರಿಹೋಕರು 'ಪುಟ್ಟಿ ಮನೆಗೆ ಯಾರೋ ಬಂದಿದ್ದಾರೆ. ಯಾವೂರಿನವರು. ಕ್ಷೇತ್ರ ದರ್ಶನಕ್ಕೆ ಬಂದಿದ್ದಾರಾ?' ಎಂದು ಕೇಳುವುದೂ ಕಿವಿಗೆ ಬಿತ್ತು.

ಅದಕ್ಕೆ ಪುಟ್ಟಿ 'ಹೌದು ಕ್ಷೇತ್ರದರ್ಶನಕ್ಕೆಂದು ಬಂದವರು, ದೇವಸ್ಥಾನದಲ್ಲಿ ಸಿಕ್ಕರು. ಒಂದೇ ಕುಟುಂಬದವರು ಎನ್ನಿಸುತ್ತದೆ. ಹತ್ತು- ಹನ್ನೆರಡು ಜನರಿದ್ದಾರೆ. ಮನೆಯ ಹಿರಿಯರೂ ಒಬ್ಬರು ಜೊತೆಗೆ ಬಂದಿದ್ದಾರೆ. ಅಪ್ಪಯ್ಯನ ಕಣ್ಣಿಗೆ ದೇವಸ್ಥಾನದಲ್ಲಿ ಕಂಡರು. ನಿಮಗೇ ಗೊತ್ತಲ್ಲ, ಅಪ್ಪಯ್ಯ ಅವರನ್ನು ಕರೆತಂದರು. ಒಂದೆರಡು ದಿನ ಇರುತ್ತಾರೆ. ನಂತರ ಹೊರಡುತ್ತಾರೆ' ಎಂದು ಹೇಳಿದಳು.

ಅವಳು ಹೇಳಿದ ಹಾಗೆ ಒಂದೆರಡು ದಿನವಲ್ಲ ಬರೋಬ್ಬರಿ ನಾಲ್ಕು ದಿನಗಳ ವಾಸ್ತವ್ಯ ಅಲ್ಲಿನದಾಯಿತು. ಅಲ್ಲಿದ್ದ ನಾಲ್ಕು ದಿನವೂ ಅತಿಥಿ ವಿಶ್ವನಾಥಯ್ಯ ಮತ್ತು ಆತಿಥೇಯ ಅಪ್ಪಯ್ಯನ ಮಧ್ಯೆ ಸತತ ಮಾತುಕತೆ ನಡೆದೇ ಇತ್ತು. ಮೂರು ದಿನಗಳ ಕಾಲ ಜಗತ್ತಿನ ಎಲ್ಲ ವಿಷಯಗಳೂ ಇವರಿಬ್ಬರ ಮಾತಿನ ಮಧ್ಯೆ ವಿನಿಮಯಗೊಂಡವು, ಅಪ್ಪಯ್ಯಗಳಿಬ್ಬರೂ ತಮ್ಮ ಕಾಲದಿಂದ ಈ ಕಾಲದವರೆಗಿನ ಎಲ್ಲವನ್ನೂ, ಎಲ್ಲರನ್ನೂ ತಮ್ಮಿಬ್ಬರ ಹರಟೆಯ ಮಾತಿನಲ್ಲಿ ತಂದರು. ಕೆಲವನ್ನು ಕೊಚ್ಚಿದರು, ಕೆಲವನ್ನು ಮೆಚ್ಚಿದರು, ಮತ್ತೆ ಕೆಲವನ್ನು ಮುಚ್ಚಿದರು, ಇನ್ನೂ ಕೆಲವಕ್ಕೆ